ಮೈಸೂರಿನ ಸಮಾಜ ಕಲ್ಯಾಣ ಅಧಿಕಾರಿಯ ಬಗ್ಗೆ

೨೨೨. ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು (ಸಮಾಜ ಕಲ್ಯಾಣ ಸಚಿವರ ಪರವಾಗಿ) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಹಾಲಿ ಕೆಲಸ ಮಾಡುತ್ತಿರುವ ಸಮಾಜ ಕಲ್ಯಾಣಾಧಿಕಾರಿ, ಮೈಸೂರು, ಅವರು ಯಾವ ಜಿಲ್ಲೆಗೆ ಸೇರಿದವರು ?

(ಆ) ಎಷ್ಟು ವರ್ಷ ಮೈಸೂರು ಜಿಲ್ಲೆಯಲ್ಲಿ ಕೆಲಸ ಮಾಡಿದ್ದಾರೆ ?

(ಇ) ಮೈಸೂರು ಜಿಲ್ಲೆಯಿಂದ ವರ್ಗ ಮಾಡದಿರಲು ಕಾರಣವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

(ಅ) ಕೋಲಾರ ಜಿಲ್ಲೆಗೆ ಸೇರಿದವರು.

(ಆ) ದಿನಾಂಕ ೧೯-೬-೧೯೯೦ ರಿಂದ ಮೈಸೂರು ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

(ಇ) ದಿನಾಂಕ ೧೯-೬-೧೯೯೦ ರಿಂದ ಮೈಸೂರು ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ವರ್ಗಾವಣೆ ಉದ್ಭವಿಸುವುದಿಲ್ಲ.

೧೯೮೯-೯೦ನೇ ಸಾಲಿನಲ್ಲಿ ದೇವದಾಸಿಯರಾಗಿ ಅರ್ಪಣೆ ಮಾಡಿಕೊಂಡವರ ಬಗ್ಗೆ

೧೫೬೦. ಶ್ರೀ ಸುಭಾಸ್ ಜೋಶಿ (ನಿಪ್ಪಾಣಿ).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ೧೯೮೯-೯೦ನೇ ಸಾಲಿನಲ್ಲಿ ದೇವದಾಸಿಯರಾಗಿ ಸಮರ್ಪಣೆಯಾದವರ ಸಂಖ್ಯೆ ;

(ಆ) ಕರ್ನಾಟಕದಲ್ಲಿರುವ ಒಟ್ಟು ದೇವದಾಸಿಯರ ಸಂಖ್ಯೆ (ಜಿಲ್ಲಾವಾರು ವಿವರ ನೀಡುವುದು)

(ಇ) ದೇವದಾಸಿಯರ ಪುನರ್ವಸತಿಗಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ ?

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಸಚಿವ) ಸಮಾಜ ಕಲ್ಯಾಣ ಸಚಿವರ ಪರವಾಗಿ.

(ಅ) ಯಾವುದೂ ಇಲ್ಲ.

(ಆ) ೧೩,೪೩೪ ಈ ಕೆಳಕಂಡ ಜಿಲ್ಲೆಗಳಲ್ಲಿ ಪಾತ್ರ ದೇವದಾಸಿಯರಿರುವುದು ಕಂಡು ಬಂದಿದೆ.

ಬೆಳಗಾವಿ	೩,೫೫೦
ಬಿಜಾಪುರ	೪,೯೯೫
ಧಾರವಾಡ	೨,೩೯೯
ರಾಯಚೂರು	೯೨೦
ಗುಲ್ಬರ್ಗಾ	೩೧೮
ಬಳ್ಳಾರಿ	೧,೩೩೨
ಬೀದರ್	೩೦
ಒಟ್ಟು	೧೩,೪೩೪

(ಇ) ರೂ ೨,೦೭,೦೪೩-೦೦